ಅನುಸರಿಸಿ ಇನ್ನೆರಡು ವರ್ಷಗಳಲ್ಲಿ ನಾವು ಯೋಜನೆಯನ್ನು ಮುಗಿಸುತ್ತೇವೆಂದು ಮಂತ್ರಿಗಳು ಆಶ್ವಾಸನೆ ಕೊಡುತ್ತಿದ್ದಾರೆ. ಆದರೆ ಇದರ ಒಟ್ಟು ಮೊತ್ತ ಎಷ್ಟು? ಪ್ರತಿ ವರ್ಷ ಖರ್ಚು ಮಾಡಿರುವ ಹಣ ಎಷ್ಟು? ಈ ವರ್ಷದ ಆಯವ್ಯಯದಲ್ಲಿ ಎಷ್ಟು ಪ್ರಾವಿಷನ್ ಮಾಡಿಕೊಂಡಿದ್ದಾರೆ? ಈ ಯೋಜನೆಗಳನ್ನು ಯಾವಾಗ ಮಾಡಿ ಮುಗಿಸಿಕೊಡುತ್ತಾರೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ನಾವು ಉತ್ತರ ಕೊಟ್ಟಿರುವ ಪ್ರಕಾರ ಈ ಕೆಲಸವನ್ನು ಏತ ನೀರಾವರಿ ನಿಗಮಕ್ಕೆ ವಹಿಸಿಕೊಡಲಾಗಿತ್ತು. ಅವರು ಮೊನ್ನೆತಾನೇ ಈ ಕೆಲಸವನ್ನು ನಮ್ಮ ಸಣ್ಣ ನೀರಾವರಿ ಇಲಾಖೆಗೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರ ಕಳಕಳಿ ಏನಿದೆ ಅದನ್ನು ಅರ್ಥ ಮಾಡಿಕೊಂಡು ಈ ಸಾರಿ ಹೆಚ್ಚಿನ ಹಣವನ್ನು ಆಯವ್ಯಯದಲ್ಲಿ ಇದಕ್ಕೆ ಕೊಟ್ಟು, ಎರಡು ವರ್ಷ ಎಂದು ಏನು ಹೇಳಿದ್ದಾರೆ, ಆ ಎರಡು ವರ್ಷದೊಳಗೆ ಈ ಕೆಲಸವನ್ನು ಪೂರೈಸುವುದಕ್ಕೆ ಆದ್ಯತೆ ಕೊಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

1997-98ರಲ್ಲಿ ಮಸೀದಿಗಳಿಗೆ ಹಣ ಮಂಜೂರಾತಿ

4 (26)

ಶ್ರೀ ಯು.ಆರ್.ಸಭಾಪತಿ (ಉಡುಪಿ):ಮಾನ್ಯ ರಾಜ್ಯ ಗೃಹ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1997-98ನೇ ಸಾಲಿನ ಎಷ್ಟು ಮಸೀದಿಗಳಿಗೆ ವಕ್ಫ್ ಬೋರ್ಡ್‌ನಿಂದ ಹಣ ಮಂಜೂರು ಮಾಡಲಾಗಿದೆ?

ಆ) 1997-98ನೇ ಸಾಲಿನಲ್ಲಿ ಖರ್ಚು ಮಾಡಲು ಉಳಿದಿರುವ ಹಣ ಎಷ್ಟು?

ಇ) ಬಾಕಿ ಉಳಿದಿರುವ ಹಣವನ್ನು ಯಾವಾಗ ಖರ್ಚು ಮಾಡಲಾಗುವುದು? (ವಿವರ ನೀಡುವುದು)

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) 515.

ಆ) ರೂ. 50.00 ಲಕ್ಷ.

ಇ) ದಿನಾಂಕ 31-3-1998ರೊಳಗೆ

11.30 ಎ.ಎಂ

ಶ್ರೀ ಯು.ಆರ್.ಸಭಾಪತಿ: ನಾನು ಕೇಳಿದ ಪ್ರಶ್ನೆಗೆ 515 ಮಸೀದಿಗಳಿಗೆ ವಕ್ಫ್ ಮಂಡಳಿಯಿಂದ ಹಣವನ್ನು ಮಂಜೂರು ಮಾಡಲಾಗಿದೆಯೆಂದು ತಿಳಿಸಿದ್ದಾರೆ. 1997-98ನೇ ಸಾಲಿನಲ್ಲಿ ಎಷ್ಟು ಹಣವನ್ನು ಬಿಡುಗಡೆಗೊಳಿಸಿದ್ದೀರಿ? ಈ ಹಣವನ್ನು ಸರ್ಕಾರದ ಯಾವ ಮಾನದಂಡದ ಪ್ರಕಾರ ವಿತರಣೆ ಮಾಡಿದೆ ಎಂಬ ಬಗ್ಗೆ ಉತ್ತರಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್: ಈ ವರ್ಷದಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಸುಮಾರು 515 ಮಸೀದಿಗಳಿಗೆ ನಾವು ಬಿಡುಗಡೆ ಮಾಡಿದ್ದೇವೆ. ಡೀಟೇಲಾದ ಪಟ್ಟಿ ಕೊಡುತ್ತೇನೆ. ಎಲ್ಲೆಲ್ಲಿ ಈ ತರಹದ ಮೆಂಟೆನೆನ್ಸ್ ಮತ್ತು ರಿಪೇರ್ಸ್‌ಗಾಗಿ ನಮ್ಮನ್ನು ಎಷ್ಟೆಷ್ಟು ಹಣವನ್ನು ಕೇಳುತ್ತಾರೋ, ನಾವು ಅವರಿಗೆ ಅಷ್ಟಷ್ಟು ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಯು.ಆರ್.ಸಭಾಪತಿ: 50 ಲಕ್ಷ ಹಣ ಉಳಿದಿದೆ ಎಂದು ಹೇಳಿದ್ದಾರೆ. ಸರ್ಕಾರದ ಮುಂದೆ ವಿಲೇವಾರಿಯಾಗಲಿಕ್ಕೆ ಇರತಕ್ಕ ಅರ್ಜಿಗಳ ಸಂಖ್ಯೆ ಎಷ್ಟು? ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟೆಂದು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಆರ್.ರೋಷನ್‌ಬೇಗ್: ದಕ್ಷಿಣ ಕನ್ನಡ ಜಿಲ್ಲೆಯ ಕುರಿತು ಸೆಪರೇಟ್ ಆಗಿ ಕೇಳಿರಲಿಲ್ಲ. ನಂತರ, ಆ ಮಾಹಿತಿ ಒದಗಿಸುತ್ತೇನೆ. ಎಲೆಕ್ಷನ್ ನೋಟಿಫಿಕೇಷನ್ ಬಂದಿದ್ದರಿಂದ 50 ಲಕ್ಷ ರೂಪಾಯಿ ಬಿಡುಗಡೆ ಮಾಡುವುದಕ್ಕಾಗಲಿಲ್ಲ. ಈಗ ನಾವು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀ ರಮಾನಾಥ ರೈ: ರಾಜ್ಯದಲ್ಲಿ ವಕ್ಫ್ ಮಂಡಳಿಯಲ್ಲಿ ಕೊಡಬೇಕಾದ ಹಣವನ್ನು ಕಳೆದ ವಾರ್ಷಿಕ ವರ್ಷ ಮತ್ತು ಅದರ ಹಿಂದಿನ ವರ್ಷ ಮತ್ತು ಕಳೆದ 5-6 ವರ್ಷಗಳಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರಿ? ಪ್ರತ್ಯೇಕ ಪ್ರತ್ಯೇಕವಾದ ಮಸೀದಿಗಳಿಗೆ ಎಷ್ಟು ಕೊಟ್ಟಿದ್ದೀರಿ ಎನ್ನುವ ಅಂಕಿಅಂಶ ಕೊಟ್ಟರೆ ಉತ್ತಮ.

ಅಧ್ಯಕ್ಷರು: ಕಳುಹಿಸಿಕೊಡುತ್ತಾರೆ. ಅದನ್ನು ಈಗ ಕೇಳುತ್ತಿದ್ದೀರಲ್ಲಾ. ಅವರಿಗೆ ಡಿಟೇಲ್ಸ್ ಕಳುಹಿಸಿಕೊಡಿ.

ಶ್ರೀ ಆರ್.ರೋಷನ್ ಬೇಗ್: ಕಳುಹಿಸಿಕೊಡುತ್ತೇನೆ.

ಹಾವೇರಿ ಜಿಲ್ಲಾ ಹಿರೇಕೆರೂರು ತಾಲ್ಲೂಕು ರಟ್ಟಿಹಳ್ಳಿ ಬಳಿ ಕುಮಧ್ವತಿ ನದಿಗೆ ಬಾಂದಾರಾದ ನಿರ್ಮಾಣ